**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಸಿ.ಸಿ.ನಂ.522/2022**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ : ಸಿಕಂದರ ತಂದೆ ಇಮಾಮಸಾಬ್ ಕೊಂಕನಳ್ಳಿ
ವಃ 56ವರ್ಷ, ಉಃ ಲಾರಿ ಚಾಲಕ
ಸಾಃ ಹೂಡಾ (ಬಿ) ಗ್ರಾಮ, ತಾಃ ಸೇಡಂ

-----

**ಆಪಾದನೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 20-12-2021 ರಂದು 07.30 ಪಿ.ಎಂ ಸುಮಾರಿಗೆ ಮಳಖೇಡ ಪೊಲೀಸ ಠಾಣೆಯ ವ್ಯಾಪ್ತಿಯ ಪೈಕಿ ಆರೋಪಿತನು ತನ್ನ ಲಾರಿ ನಂ.MH31CQ0961 ನೇದ್ದರಲ್ಲಿ ಸಿಮೆಂಟ್ ಲೋಡ ತುಂಬಿಕೊಂಡು ಚಾಸಾ.1ರವರ ತಂದೆಯಾದ ಮೃತ ಮಹಮದ್ ಹುಸೇನ್ ಇತನಿಗೆ ಕ್ಲೀನರ ಕೆಲಸಕ್ಕಾಗಿ ಕರೆದುಕೊಂಡು ಚಿಂಚೋಳಿಗೆ ಹೋಗಿ ಸಿಮೆಂಟ್ ಲೋಡ ಖಾಲಿ ಮಾಡಿಕೊಂಡು ಮರಳಿ ಮಳಖೇಡ ಗ್ರಾಮಕ್ಕೆ ಬರುವಾಗ ಸೇಡಂ-ಕಲಬುರಗಿ ರಾಜ್ಯ ರಸ್ತೆಯಲ್ಲಿ ಮಳಖೇಡ ಸಮೀಪ ರಾಜಶೇಖರ ಪುರಾಣಿಕ ಇವರ ಹೊಲದ ಹತ್ತಿರ ಆರೋಪಿತನು ತನ್ನ ಲಾರಿಯನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ತಿರುವಿನಲ್ಲಿ ಒಮ್ಮೇಲೆ ಲಾರಿಯನ್ನು ತಿರುವಿದ್ದರಿಂದ ಮಹ್ಮದ್ ಹುಸೇನ್ ಇತನು ಲಾರಿ ಮೇಲಿಂದ ಕೆಳಗೆ ಬಿದ್ದು ಅಪಘಾತವಾಗಿದ್ದು, ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ.279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ತನ್ನ ವಶದಲ್ಲಿದ್ದ ಲಾರಿ ನಂ.MH31CQ0961 ನೇದ್ದನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ತಿರುವಿನಲ್ಲಿ ಒಮ್ಮೇಲೆ ಲಾರಿಯನ್ನು ತಿರುವಿದ್ದರಿಂದ ಮಹ್ಮದ್ ಹುಸೇನ್ ಇತನು ಲಾರಿ ಮೇಲಿಂದ ಕೆಳಗೆ ಬಿದ್ದು ಗಂಭೀರ ಸ್ವರೂಪದ ಗಾಯಗಳಾಗಿ ಮಳಖೇಡ ಸರಕಾರಿ ಆಸ್ಪತ್ರೆಯಿಂದ ಸೇಡಂ ಸರಕಾರಿ ಆಸ್ಪತ್ರೆಗೆ ಅಂಬುಲೆನ್ಸನಲ್ಲಿ ಸಾಗಿಸುವಾಗ ದಿ.20.12.2021ರಂದು ರಾತ್ರಿ 08.30 ಗಂಟೆ ಸುಮಾರಿಗೆ ಮೃತಪಟ್ಟಿದ್ದು, ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ. 304(ಎ) ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

(ಆರೋಪಣೆಯನ್ನು ಆರೋಪಿತರಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

ಸಹಿ/-

ದಿನಾಂಕ 24-10-2025 ಪ್ರ.ದ.ನ್ಯಾ .ದಂ. ಸೇಡಂ.

**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ</u>**

**<u>ಸಿ.ಸಿ.ನಂ.522/2022</u>**

ಫಿರ್ಯಾದಿಃ ಕರ್ನಾಟಕ ಸರ್ಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ : ಸಿಕಂದರ ತಂದೆ ಇಮಾಮಸಾಬ್ ಕೊಂಕನಳ್ಳಿ
ವಃ 56ವರ್ಷ, ಉಃ ಲಾರಿ ಚಾಲಕ
ಸಾಃ ಹೂಡಾ (ಬಿ) ಗ್ರಾಮ, ತಾಃ ಸೇಡಂ

**<u>ಆಪಾದನೆ</u>**

ಪ್ರಃ-1) ಈಗ ಓದಿ ಹೇಳಲಾದ ಆರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿಯಾ?

ಉತ್ತರಃ-

ಪ್ರಃ-2) ನೀನು ತಪ್ಪನ್ನು ಒಪ್ಪಿಕೊಳ್ಳುತ್ತಿಯಾ ಅಥವಾ ವಿಚಾರಣೆ ನಡೆಯಬೇಕಾ?

ಉತ್ತರಃ-

ಸಹಿ/-

ದಿನಾಂಕ 24-10-2025 ಪ್ರ.ದ.ನ್ಯಾ.ದಂ. ಸೇಡಂ.